ಸಂಖ್ಯೆ 262
ದಿನಾಂಕ 23/12/15
ಬೆಂಗಳೂರು-52

**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಅಲೆಮಾರಿ/ ಅರೆಅಲೆಮಾರಿ ಜನಾಂಗದ ಅಭಿವೃದ್ಧಿಗೆ ನಿಗಮದಿಂದ ಅನುಷ್ಠಾನಗೊಳಿಸುತ್ತಿರುವ ಭೂ ಒಡೆತನ ಯೋಜನೆ ಬಗ್ಗೆ.

**ಓದಲಾಗಿದೆ:**
1. ಸರ್ಕಾರಿ ಆದೇಶ ಸಂಖ್ಯೆ:ಸಕಇ234 ಬಿಎಂಎಸ್ 2007, ದಿನಾಂಕ:21.09.2007.
2. ಸರ್ಕಾರದ ಆದೇಶ ಸಂಖ್ಯೆ:ಸಕಇ 378 ಬಿಎಂಎಸ್ 2014, ದಿನಾಂಕ:05.09.2014.
3. ಅಲೆಮಾರಿ/ಅರೆಅಲೆಮಾರಿ ಜನಾಂಗದ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಕುರಿತು ದಿನಾಂಕ:17.10.2015ರಂದು ನಡೆದ ಅಲೆಮಾರಿ ಜನಾಂಗದ ಪ್ರತಿನಿಧಿಗಳೊಂದಿಗೆ ಏರ್ಪಡಿಸಿದ ಸಭೆಯ ನಡಾವಳಿ.
4. ದೇಹಿನಿ/ಅಲೆಮಾರಿ/ಭೂ ಒಡೆತನ–ಏಕ/ಸಿ.ಆರ್–12/2015–16.

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ
ಬೆಂಗಳೂರು
22 DEC 2015
ಪ್ರ.ವ್ಯ.-1
ಪ್ರ.ವ್ಯ.-2

COMPUTER NO. 2331
DATE 23.12.15

******

**ಪ್ರಸ್ತಾವನೆ:–**

ಮೇಲೆ ಓದಲಾದ(1)ರಲ್ಲಿ ಹಿಂದುಳಿದ ವರ್ಗಗಳಲ್ಲಿ ಅತ್ಯಂತ ಹಿಂದುಳಿದ ಅಲೆಮಾರಿ/ ಅರೆಅಲೆಮಾರಿ ಜನಾಂಗದ ಭೂ ರಹಿತ ಕೃಷಿ ಕಾರ್ಮಿಕರಿಗೆ 2 ಎಕರೆ ಖುಷ್ಕಿ ಅಥವಾ 1 ಎಕರೆ ತರಿ ಜಮೀನು ಖರೀದಿಸಲು ಸಹಾಯಧನ ಮತ್ತು ಸಾಲ ಸೌಲಭ್ಯ ಒದಗಿಸುವ ಮೂಲಕ ಭೂ ಒಡೆತ ಯೋಜನೆಯನ್ನು ಜಾರಿಗೆ ತರಲು ಸರ್ಕಾರ ಮಂಜೂರಾತಿ ನೀಡುತ್ತದೆ. ಭೂ ಒಡೆತನ ಯೋಜನೆಯನ್ನು ಅನುಷ್ಠಾನಗೊಳಿಸುವುದಕ್ಕೆ ರೂ.50.00ಲಕ್ಷಗಳು ಬಿಡುಗಡೆ ಮಾಡಿ ಆದೇಶಿಸಿಸಲಾಗಿರುತ್ತದೆ.

ಮೇಲೆ ಓದಲಾದ(2)ರಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಅಲೆಮಾರಿ/ಅರೆಅಲೆಮಾರಿ ಜನಾಂಗಗಳ ಭೂ ಒಡೆತನ ಯೋಜನೆಯಲ್ಲಿ ಭೂಮಿ ಖರೀದಿಸಲು ಘಟಕ ವೆಚ್ಚದ ಆರ್ಥಿಕ ಮಿತಿಯನ್ನು ರೂ.5.00ಲಕ್ಷದಿಂದ ರೂ.10.00ಲಕ್ಷಗಳ ವರೆಗೆ ಹೆಚ್ಚಿಸಿ, ಆದೇಶಿಸಲಾಗಿರುತ್ತದೆ.

ಮೇಲೆ ಓದಲಾದ(3)ರ ಅಲೆಮಾರಿ/ಅರೆಅಲೆಮಾರಿ ಜನಾಂಗದ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಕುರಿತು ದಿನಾಂಕ:07.10.2015ರಂದು ನಡೆದ ಅಲೆಮಾರಿ/ಅರೆಅಲೆಮಾರಿ ಜನಾಂಗದ ಪ್ರತಿನಿಧಿಗಳೊಂದಿಗೆ ಏರ್ಪಡಿಸಿದ ಸಭೆಯ ನಡಾವಳಿಯಲ್ಲಿ ಭೂ ಖರೀದಿ ಯೋಜನೆಯಡಿ ನಿಗಧಿಪಡಿಸಿದ ಘಟಕ ವೆಚ್ಚ ರೂ.10.00ಲಕ್ಷಗಳಿಗಿಂತ ಹೆಚ್ಚಿಸುವುದು ಹಾಗೂ ಇದರಲ್ಲಿ ಶೇ.70% ಸಹಾಯಧನ ಶೇ:30% ರಷ್ಟು ಸಾಲವಿರಬೇಕು ಗುರಿಗಿಂತ ಹೆಚ್ಚುವರಿಯಾಗಿ ಬಂದಿರುವ ಅರ್ಜಿಗಳಿಗೆ ವಿವೇಚನಾ ಕೂಟ ನಿಗಧಿಪಡಿಸಿ, ಸೌಲಭ್ಯ ಒದಗಿಸಬೇಕೆಂದು ತೀರ್ಮಾನವಾಗಿರುತ್ತದೆ. ಹಾಗೂ ಭೂ ಖರೀದಿ ಯೋಜನೆಯಲ್ಲಿ ಅಲೆಮಾರಿ ಜನಾಂಗದವರು ವಾಸಿಸುತ್ತಿರುವ 5 ಕಿ.ಮೀ. ವಿಸ್ತೀರ್ಣದೊಳಗಿನ ಜಮೀನು ಖರೀದಿಸುವುದು ಎಂಬ ನಿರ್ಬಂಧವನ್ನು ಸಡಿಲಿಸುವುದು ಆಯಾ ಕಂದಾಯ ಗ್ರಾಮ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಜಮೀನನ್ನು ಖರೀದಿಸಲು ಅವಕಾಶ ನೀಡುವುದು.

...2

ಮೇಲೆ ಓದಲಾದ (4)ರಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅಲೆಮಾರಿ/ಅರೆಅಲೆಮಾರಿ ಭೂ ಒಡೆತನ ಯೋಜನೆಯನ್ನು ಅನುಷ್ಠಾನಗೊಳಿಸಲು ನಿರ್ದೇಶಕ ಮಂಡಳಿಯ ಅನುಸಮರ್ಥನೆಯೊಂದಿಗೆ ಮಂಜೂರಾತಿ ನೀಡುವಂತೆ ಕೋರಿ ವ್ಯವಸ್ಥಾಪಕ ನಿರ್ದೇಶಕರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 1287 ಬಿಎಂಎಸ್ 2015, ಬೆಂಗಳೂರು**
**ದಿನಾಂಕ: 21-12-2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಿಂದ ಅಲೆಮಾರಿ/ಅರೆಅಲೆಮಾರಿ ಭೂ ಒಡೆತನ ಯೋಜನೆಯನ್ನು ಅನುಷ್ಠಾನಗೊಳಿಸಲು ಈ ಕೆಳಕಂಡ ಷರತ್ತುಗೊಳಪಟ್ಟು ಆದೇಶಿಸಲಾಗಿದೆ.

**ಷರತ್ತುಗಳು:**

1) ಭೂ ಒಡೆತನ ಯೋಜನೆಯ ಘಟಕ ವೆಚ್ಚ ರೂ.10.00ಲಕ್ಷಗಳಲ್ಲಿ 2 ಎಕರೆ ಖುಷ್ಕಿ ಜಮೀನು ಅಥವಾ 1 ಎಕರೆ ತರಿ ಜಮೀನು ಕನಿಷ್ಠ 20 ಗುಂಟೆ ಕಡಿಮೆ ಇಲ್ಲದಂತೆ ಖರೀಸಲು ಹಾಗೂ ಜಮೀನನ್ನು ಹೆಂಡತಿ ಅಥವಾ ಗಂಡ-ಹೆಂಡತಿ ಇಬ್ಬರ ಹೆಸರಿನಲ್ಲಿ ಜಂಟಿಯಾಗಿ ನೊಂದಾಯಿಸತಕ್ಕದ್ದು.
2) ಭೂ ಒಡೆತನ ಯೋಜನೆಯಲ್ಲಿ ಖರೀದಿಸುವ ಜಮೀನು ಫಲಾನುಭವಿಗಳು ವಾಸಿಸುತ್ತಿರುವ ತಾಲ್ಲೂಕು ವ್ಯಾಪ್ತಿಯ ಮಿತಿಯಲ್ಲಿರಬೇಕು
3) ಖರೀದಿಸುವ ಜಮೀನಿನ ಭೂ ಮಾಲೀಕರು ಅಲೆಮಾರಿ/ಅರೆಅಲೆಮಾರಿ ಅಥವಾ ಹಿಂದುಳಿದ ವರ್ಗಗಳ ಪ್ರವರ್ಗ-1ಕ್ಕೆ ಸೇರಿದ್ದು, 5 ಎಕರೆಗಳಿಗಿಂತ ಹೆಚ್ಚುವರಿ ಜಮೀನನ್ನು ಹೊಂದಿದ್ದು, ಹೆಚ್ಚುವರಿ ಜಮೀನನ್ನು ಸ್ವ ಇಚ್ಛೆಯಿಂದ ಮಾರಾಟ ಮಾಡಲು ಭೂ ಮಾಲೀಕರು ಇಚ್ಛಿಸಿದ್ದಲ್ಲಿ ಅಂತಹ ಜಮೀನನ್ನು ಸಹ ಅಲೆಮಾರಿ/ಅರೆಅಲೆಮಾರಿ ಜನಾಂಗದವರಿಗೆ ಖರೀದಿಸಲು ಅನುಮತಿ ನೀಡುವುದು.
4) ಭೂ ಒಡೆತನ ಯೋಜನೆಯಲ್ಲಿ ನೋಂದಾಯಿತ ಬೆಲೆ ಮೂರು ಪಟ್ಟುವರೆಗೆ ಘಟಕ ವೆಚ್ಚದ ಗರಿಷ್ಠ ಮಿತಿಯಲ್ಲಿ ರೂ.10.00ಲಕ್ಷಗಳಿಗೆ ಮಿರದಂತೆ (ಹಾಲಿ ಚಾಲ್ತಿಯಲ್ಲಿರುವಂತೆ ಶೇಕಡಾ 50 ರಷ್ಟು ಸಹಾಯಧನ ಹಾಗೂ ಉಳಿಕೆ ಶೇಕಡಾ 50 ರಷ್ಟು ಸಾಲ) ಮತ್ತು ಖರೀದಿ ಬೆಲೆ, ನೋಂದಾಯಿತ ಬೆಲೆಯ ಮೂರು ಪಟ್ಟು ಮೀರದ ಪ್ರಕರಣಗಳನ್ನು ಸರ್ಕಾರದಿಂದ ಅನುಮೋದನೆ ಪಡೆಯತಕ್ಕದ್ದು.
5) ಉಳಿದಂತೆ ಭೂ ಒಡೆತನ ಯೋಜನೆಯಲ್ಲಿ ಈ ಹಿಂದಿನ ಆದೇಶಗಳಲ್ಲಿ ತಿಳಿಸಿರುವ ಷರತ್ತುಗಳು ಮುಂದುವರೆಯತಕ್ಕದ್ದು.

ಇದಕ್ಕೆ ತಗಲುವ ವೆಚ್ಚವನ್ನು ಸಂಬಂಧಿಸಿದ ಲೆಕ್ಕಶೀರ್ಷಿಕೆಯಡಿ ಲಭ್ಯವಿರುವ ಅನುದಾನದಿಂದ ಭರಿಸತಕ್ಕದು.

ಈ ಆದೇಶವನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿದ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

(ಆರ್:ಭಾಸ್ಕರ್)
ಸರ್ಕಾರದ ಅಧೀನ ಕಾರ್ಯದರ್ಶಿ-2
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, (ಎ ಮತ್ತು ಎ) ಬೆಂಗಳೂರು.
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಬೆಂಗಳೂರು.
4. ಎಲ್ಲಾ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಪ್ರತಿ:-

1. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆರವರ ಆಪ್ತ ಸಹಾಯಕರು, ವಿಕಾಸಸೌಧ, ಬೆಂಗಳೂರು.
4. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.